## ಕವಿತೆ



# ಸಿವನಿಂಗ...

ಜೋಡುಗೊಡ ಹೊತಗೊಂಡು ನೀರು ತರಲು ಹೋದೆ
ನೀರೆಲ್ಲಿ ಆದರ ಸೆಲಿ ಎಲ್ಲಿ ಸೋ।
ನೀರೆಲ್ಲಿ ನೀ ಆದರ ಸೆಲಿ ಎಲ್ಲಿ ದೊಡ್ಡವರ
ಹಂಡೆ ಹೌದೆ ರಂಜನಿಗಿ ಎಲ್ಲಿ ಸೋ।

ಜೋಡಕುರಪಿ ಹಿಡಕೊಂಡು
ಹುಲ್ಲು ಕೊಯ್ಯಲು ಹೋದೆ
ಹಸರೆಲ್ಲಿ ಆದರ ಬಸರೆಲ್ಲಿ ಸೋ।
ಹಸರೆಲ್ಲಿ ನೀ ಆದರ ಬಸರೆಲ್ಲಿ ಸಿವನಿಂಗ
ಕೂರಿಗಿ ಮಾರವರ ಹೊಲ ಎಲ್ಲಿ ಸೋ।

ಜೋಡೊಣಕಿ ಹೊತಗೊಂಡು
ನವಣೆ ಕುಟ್ಟಲು ಹೋದೆ
ದಂಟೆಲ್ಲಿ ಆದರ ತೆನಿ ಎಲ್ಲಿ ಸೋ।
ದಂಟೆಲ್ಲಿ ನೀ ಆದರ ತೆನಿ ಎಲ್ಲಿ ಸಿವನಿಂಗ
ಒಕ್ಕಲು ಮಾಡವರ ಕಣ ಎಲ್ಲಿ ಸೋ।

ಜೋಡಾರತಿ ಹಿಡಕೊಂಡು
ಕಣಜ ಕಟ್ಟಲು ಹೋದೆ
ಬಿದರೆಲ್ಲಿ ಆದರ ಹೆಣಿಕೆಲ್ಲಿ ಸೋ।
ಬಿದಿರೆಲ್ಲಿ ನೀ ಆದರ ಹೆಣಿಕೆಲ್ಲಿ ಸಿವನಿಂಗ
ನಿಟ್ಟಚ್ಚೊ ರೈತನ ಹೆಗಲೆಲ್ಲಿ ಸೋ।

ಜೋಡೊಲಿ ಪುಟಿ ಮಾಡಿ
ಹಿಂದೊಲಿಗೊಂದ ಗಡಿಗಿಟ್ಟು
ಅಂಬಲಿ ತಿರವಲು ಹುಟಗೈಯ್ಯ ಸೋ।
ಅಂಬಲಿ ತಿರವಲು ಹುಟಗ್ಗೈ ನನ ಸಿವನಿಂಗ
ಕೆಂಡದ ಸುರಿಮಳಿಯ ಸೂರ ನೀರ ಸೋ।

ಕೆಂಡದ ಸುರಿಮಳಿಯ ಸೂರ ನೀರ
ನನ ಸಿವನಿಂಗ
ಗಂಟಲದಾಗ ಉರಿಗಡಬ ಸೋ।
ಉರಿಗಡಬ ಸಿರಿಗಡಬ
ಸೂರ ಸುಡುವ ಕಡಬ
ಬೂದಿಯ ಬಾಂದಾನ ಬಾಳೇವ ಸೋ।




ಭುವನಾ ಹಿರೇಮಠ


ಕಲೆ: ಮುರಳೀಧರ್ ರಾಥೋಡ್